ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಮಂಗಳವಾರ ೧ನೇ ಅಕ್ಟೋಬರ್ ೧೯೯೧, ಆಶ್ವಯುಜ ೯, ಶಕ ೧೯೧೩

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೦.೩೫ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: **(ಶ್ರೀ ಎಸ್.ಎಮ್. ಕೃಷ್ಣ)** ಅವರು ಪೀಠವನ್ನು ಅಲಂಕರಿಸಿದರು.

ಶ್ರೀ ಸಿ. ಬೈರೇಗೌಡ (ವೇಮಗಲ್) : ಸನ್ಮಾನ್ಯ ಇವತ್ತಿನ ದಿವಸ ನಾನು ಒಂದು ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ. ಅದರ ವಿಷಯ ಏನೆಂದರೆ, ನಮ್ಮ ರಾಜ್ಯದಲ್ಲಿ ಹಾಲು ಉತ್ಪಾದಕರು...

ಅಧ್ಯಕ್ಷರು : ಒಂದು ನಿಮಿಷ ;

ಅಧ್ಯಕ್ಷರ ತೀರ್ಪು

ಮೆ. ಮೋಹನ್ ಮೆಕಿನ್ಸ್ ಅವರಿಗೆ ಜಮೀನು ಕೊಟ್ಟಿರುವ ಬಗ್ಗೆ

ಸನ್ಮಾನ್ಯ ಮುಖ್ಯಮಂತ್ರಿಗಳು, ತಮ್ಮ ಮಂತ್ರಿಮಂಡಲದ ವಿರುದ್ಧ ಮಂಡಿಸಿದ ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡುವ ಸಂದರ್ಭದಲ್ಲಿ ಮೆ. ಮೋಹನ್ಸ್ ಮೆಕಿನ್ಸ್ ಅವರಿಗೆ, 'ಹೈಕೋರ್ಟಿನ ಆದೇಶದ ಪ್ರಕಾರ' ಜಮೀನನ್ನು ಕೊಡಲಾಗಿದೆ ಎಂದು ತಿಳಿಸಿ, ನಿವೇಶನ ಹಂಚಿಕೆದಾರರ ರಿಟ್ ಅರ್ಜಿಗಳ ಸಂಖ್ಯೆ 5490 - 91ನ್ನು ಆಧರಿಸಿದ್ದನ್ನು ಸತ್ಯಕ್ಕೆ ದೂರವಾದ ಸಂಗತಿ ಎಂದು ಆಪಾದಿಸಿ, ಮಾನ್ಯ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಹಕ್ಕುಬಾಧ್ಯತಾ ಸೂಚನೆಯನ್ನು ಕೊಟ್ಟಿರುತ್ತಾರೆ. ನಿಯಮಗಳ ರೀತ್ಯಾ ಹಕ್ಕು ಬಾಧ್ಯತಾ ಹಾಗೂ ಸಭಾನಿಂದನೆಯನ್ನು ಕಂಡುಕೊಳ್ಳಲು, ಸದನದಲ್ಲಿ ಮಾಡಲಾದ ಮಂತ್ರಿಗಳ ಅಥವಾ ಸದಸ್ಯರ ಹೇಳಿಕೆ ತಪ್ಪಾಗಿರುವುದು ಅಷ್ಟೇ ಅಲ್ಲ, ಸದನವನ್ನು ಉದ್ದೇಶಪೂರ್ವಕವಾಗಿ ತಪ್ಪುದಾರಿಗೆ ಎಳೆಯಲಾಗಿದೆ ಎನ್ನುವುದು ನಿರೂಪಣೆಯಾಗಬೇಕು. ಇಂಥ ಹೇಳಿಕೆಯನ್ನು ಗಮನಿಸಿದ ಮತ್ತೊಬ್ಬ ಸದಸ್ಯರು, ಇದು ತಮಗೆ ಸರಿಯಲ್ಲವೆಂದು ಭಾವಿಸಿದರೆ ಅಥವಾ ಅದು ಅಪೂರ್ಣವಾಗಿದೆ ಎನ್ನುವುದು, ಹಕ್ಕು ಬಾಧ್ಯತೆಯಾಗುವುದಿಲ್ಲ. ಇಂಥ ವಿಷಯಗಳನ್ನು ಸದನದಲ್ಲಿ ಪ್ರಸ್ತಾಪಿಸಲು ಅನ್ಯ ಮಾರ್ಗಗಳಿವೆ. ಆದ್ದರಿಂದ, ಮಂತ್ರಿಗಳಾಗಲಿ, ಸದಸ್ಯರಾಗಲಿ ತಪ್ಪು ಹೇಳಿಕೆಯನ್ನು, ತಿಳಿದಿದ್ದೂ, ಉದ್ದೇಶಪೂರ್ವಕವಾಗಿ, ಸದನದಲ್ಲಿ ಮಾಡಿದಾಗ ಮಾತ್ರ ಸದಸ್ಯರು ಹಕ್ಕು ಭಾಧ್ಯತಾ ಸೂಚನೆಯನ್ನು ಕೊಡಬಹುದು.

ಈ ಸಂದರ್ಭದಲ್ಲಿ ದಿನಾಂಕ : 5-9-91ರ ವಿಧಾನ ಸಭಾ ನಡವಳಿಕೆಯನ್ನು ಪರಿಶೀಲಿಸಿದಾಗ, ಮಾನ್ಯ ಮುಖ್ಯ ಮಂತ್ರಿಗಳು

"In respect of Mohan Meakins case, there has been a judgement of the High Court